4 ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸ್ಪೇಷಲ್ ನ್ಯಾಯಾಧೀಶರು (ಪಿಸಿಎ) ಬೆಳಗಾವಿ ಇವರ ನ್ಯಾಯಾಲಯದಲ್ಲಿ
ಮುಕ್ಕಾಂಃ ಬೆಳಗಾವಿ.

ಸ್ಪೇಷಲ್ ಕೇಸ್ ನಂಃ533/2019
ಫ್ರಾಸಾಃ 1
ಚಾಸಾಃ 2

ಸಾಕ್ಷಿಯ ಹೆಸರುಃ ತೇಜಸ ನಾರಾಯಣ ವಾಲವಲಕರ

ತಂದೆಯ ಹೆಸರುಃ ನಾರಾಯಣ ವಾಲವಲಕರ

ವಯಸ್ಸುಃ 32 ವರ್ಷ

ಉದ್ಯೋಗಃ ಪ್ರೊಜೆಕ್ಟ Cordinator, ಪಿಬಿ ಕುಲಕರ್ಣಿಫೌಂಡೆಶನ ಬೆಳಗಾವಿ

ವಾಸ್ತವ್ಯಃ ಭಾಗ್ಯ ನಗರ ಬೆಳಗಾವಿ

ದಿನಾಂಕಃ **21.02.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು 2016 ರಿಂದ 2020 ನೇ ಇಸವಿಯವರೆಗೆ ಆರ್‌ಪಿಎಡಿ ಕ್ರಾಸ ತಿಲಕವಾಡಿ ಬೆಳಗಾವಿ ಇಲ್ಲಿದ್ದ ರಸೋಯಿ ದಿ ಪಂಚಾಬಿ ಕಿಚನ್ ಹೊಟೇಲನಲ್ಲಿ ಮ್ಯಾನೇಜರ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನು. ಆ ಹೊಟೇಲನ ಮಾಲಿಕರು ಚಾಸಾ 1 ರವಿ ಶಿಂದೆ ಮತ್ತು ಚಾಸಾ-3 ದತ್ತಾತ್ರಯ ಜಾಧವ ಇರುತ್ತಾರೆ. ಅವರಿಬ್ಬರೂ ಹೊಟೇಲನ ಪಾಲುದಾರರು.

ದಿನಾಂಕ 19.06.2018 ರಂದು ನಮ್ಮ ಹೊಟೇಲಗೆ ಲೇಬರ ಇನ್ಸಪೆಕ್ಟರ ಬಂದು ನೋಟಿಸನ್ನು ನೀಡಿದ್ದರು. ಆ ಲೇಬರ ಇನ್ಸಪೆಕ್ಟರನ್ನು ನೀವು ಗುರುತಿಸಿತ್ತೀರಾ ಎಂದರೆ ಸಾಕ್ಷಿಯು ನನಗೆ ಈಗ ಗುರುತಿಸಲಾಗುವುದಿಲ್ಲ ಎನ್ನುತ್ತಾರೆ. ಈ ರೀತಿ ಲೇಬರ ಇನ್ಸಪೆಕ್ಟರವರು ಚಾಸಾ 1 ರವಿ ಶಿಂದೆ ಇವರಿಗೆ ದಿನಾಂಕ 19.06.2018 ರಂದು ನೋಟಿಸ ಕೊಟ್ಟಿದ್ದರು ಆಗ ನಾನು ಸ್ಥಳದಲ್ಲಿ ಇರಲಿಲ್ಲ ಆ ಕಾರಣ ನನಗೆ ಆರೋಪಿಯನ್ನು ಗುರುತಿಸಲಾಗುವುದಿಲ್ಲ. ಸದರಿ ಲೇಬರ ಇನ್ಸಪೆಕ್ಟರವರು ಹಾಜರಿ ಪುಸ್ತಕ, ವೇತನ ಪುಸ್ತಕ ತೋರಿಸುವಂತೆ ಚಾಸಾ-1 ರವರಿಗೆ ನೋಟಿಸ ಕೊಟ್ಟಿದ್ದರು. ನನಗೆ ಲೇಬರ ಇನ್ಸಪೆಕ್ಟರವರು ಚಾಸಾ 1 ರವರಿಗೆ ದಿನಾಂಕ 19.06.2018 ರಂದು ಈ ರೀತಿ ನೋಟಿಸ ಕೊಟ್ಟಿದ್ದರೆಂದು ಹೊಟೇಲನ ಮಾಲಿಕರಾದ ಚಾಸಾ-1 ರವರು ದಿನಾಂಕ 20.06.2018 ರಂದು ನಾನು ಹೋಟೆಲಗೆ ಹೋದಾಗ ತಿಳಿಸಿದರು. ಆ ರೀತಿ ಹೊಟೇಲಗೆ ಬಂದ ಲೇಬರ ಇನ್ಸಪೆಕ್ಟರವರು ಹೊಟೇಲನಲ್ಲಿದ್ದ ಹಾಜರಿ ಪುಸ್ತಕ, ವೇತನ ಪುಸ್ತಕ, ಸೆಲ್ಸ ಪುಸ್ತಕದ ರಸೀದಿಗಳು ಇವುಗಳನೆಲ್ಲಾ ತೆಗೆದುಕೊಂಡು ಹೋಗಿದ್ದರೆಂದು ಮತ್ತು ಚಾಸಾ 1 ರವರಿಗೆ ವಿಸಿಟಿಂಗ್ ಕಾರ್ಡ ಕೊಟ್ಟು ಅವರ ಕಚೇರಿಗೆ ಬರುವಂತೆ ಹೇಳಿ ಹೋದರೆಂದು ನನಗೆ ತಿಳಿಸಿದರು. ಆ ರೀತಿ ಬಂದ ಲೇಬರ ಇನ್ಸಪೆಕ್ಟರವರು ಚಾಸಾ 1 ರವರಿಗೆ ಪ್ರತಿ ತಿಂಗಳಿಗೆ ರೂ.1000/-ಯಂತೆ ಲಂಚದ ಹಣ ಕೊಡಬೇಕು ಅಥವಾ ವರ್ಷಕ್ಕೆ ರೂ.10000/- ಲಂಚದ ಹಣ ಕೊಡಬೇಕೆಂದು ಲೇಬರ ಇನ್ಸಪೆಕ್ಟರ ಹೇಳಿ ಹೋದರೆಂದು ಚಾಸಾ 1 ನನಗೆ ದಿನಾಂಕ 20.06.2018 ರಂದು

ಹೇಳಿದರು. ಇದಾದ ನಂತರ ದಿನಾಂಕ 06.07.2018 ರಂದು ನಾನು ರಸೋಯಿ ದಿ ಪಂಜಾಬಿ ಕಿಚನ್ ಹೊಟೇಲನಲ್ಲಿ ಇದ್ದಾಗ ಮಧ್ಯಾಹ್ನ 01.00 ಗಂಟೆಗೆ ನ್ಯಾಯಾಲಯದ ಮುಂದೆ ಇದ್ದ 2 ನೇ ಆರೋಪಿ ನಮ್ಮ ಹೊಟೇಲಗೆ ಬಂದನು. 2 ನೇ ಆರೋಪಿ ನನ್ನ ಹೊಟೇಲಗೆ ಬಂದು ನನ್ನನ್ನು ಸಿನಿಯರ ಲೇಬರ ಇನ್ಸಪೆಕ್ಟರ ಜಾದವ ಇವರು ಕಳುಹಿಸಿರುತ್ತಾರೆ ಈಗ 6 ತಿಂಗಳಿನ ಹಣ ರೂ.6000/-ಕೊಡಬೇಕು ಅಥವಾ ಪ್ರತಿ ತಿಂಗಳಿಗೆ ರೂ.1000/-ದಂತೆ ವರ್ಷಕ್ಕೆ 12 ಸಾವಿರ ಕೊಡಬೇಕೆಂದು ನನಗೆ ತಿಳಿಸಿದರು.ಆಗ ನಾನು ಮತ್ತು ನಮ್ಮ ಹೊಟೇಲನಲ್ಲಿ ಕೆಲಸ ಮಾಡುವವರು ಹಾಗೂ ಗ್ರಾಹಕರು ಹೊಟೇಲನಲ್ಲಿ ಇದ್ದೆವು. 2 ನೇ ಆರೋಪಿಯು ಈ ರೀತಿ ನನ್ನಲ್ಲಿ ಹಣ ಕೇಳಿದಾಗ ನಾನು ಚಾಸಾ -1 ರವಿ ಶಿಂದೆಗೆ ಫೋನ ಮಾಡಿ ಈ 2 ನೇ ಆರೋಪಿ ಹಣ ಕೇಳುತ್ತಿದ್ದ ಬಗ್ಗೆ ಹೇಳಿದೆನು. 2 ನೇ ಆರೋಪಿಯು ಆತನ ಮೇಲಾಧಿಕಾರಿಯಾದ ಸಿನಿಯರ ಲೇಬರ ಇನ್ಸಪೆಕ್ಟರಗೆ ಫೋನ ಮಾಡಿ ಈ ರೀತಿ ತಾನು ಹೊಟೇಲನಲ್ಲಿ ಹಣ ಕೇಳಿದ ಬಗ್ಗೆ ಹೇಳಿದನು.2 ನೇ ಆರೋಪಿಗೆ ನಾನು ನಮ್ಮ ಹೊಟೇಲನಲ್ಲಿ ಸೂಪ ಕುಡಿಯಲು ಕೊಟ್ಟೇನು. ನಾನು ಚಾಸಾ 1 ರವರಿಗೆ 2 ನೇ ಆರೋಪಿ ಹಣ ಕೇಳಿದ ವಿಷಯವನ್ನು ಹೇಳಿದಾಗ ಚಾಸಾ-1 ರವರು ನನ್ನ ಮತ್ತು ಆರೋಪಿಯ ನಡುವಿನ ಸಂಭಾಷಣೆಯನ್ನು ವಿಡಿಯೋ ರೆಕಾರ್ಡ ಮಾಡಲು ಹೇಳಿದ್ದರು.ಆಗ ನಾನು 2 ನೇ ಆರೋಪಿಯಲ್ಲಿ ಮಾತನಾಡುತ್ತಾ ಹಣವನ್ನು ಸ್ವಲ್ಪ ಕಡಿಮೆ ಮಾಡುವಂತೆ ಕೇಳಿದೆನು. ನಾನು 2 ನೇ ಆರೋಪಿಯಲ್ಲಿ ವರ್ಷಕ್ಕೆ 9000/- ರೂಪಾಯಿ ಮಾಡುವಂತೆ ತಿಳಿಸಿದೆನು ಆಗ 2 ನೇ ಆರೋಪಿಯು ರೂ.10000/-

ಕೊಡಲೇ ಬೇಕು ಎಂದು ಹೇಳಿದನು. 2 ನೇ ಆರೋಪಿ ಈ ರೀತಿ ಹಣ ಬೇಡಿಕೆ ಇಟ್ಟಿದ್ದನ್ನು ನನ್ನ ಮೊಬೈಲ ಫೋನನಲ್ಲಿ ವಿಡಿಯೋ ಆಡಿಯೋ ರೆಕಾರ್ಡ ಮಾಡಿದೆನು. 2 ನೇ ಆರೋಪಿಯು ನಂತರ ನಮ್ಮ ಹೊಟೇಲನಿಂದ ಹೋದನು. ನಾನು 2 ನೇ ಆರೋಪಿ ಹಣ ಬೇಡಿಕೆ ಇಟ್ಟ ಬಗ್ಗೆ ಮೊಬೈಲನಲ್ಲಿ ರೆಕಾರ್ಡ ಮಾಡಿಕೊಂಡಿದ್ದನ್ನು ಚಾಸಾ-1 ರವಿ ಶಿಂದೆ ಇವರ ಮೊಬೈಲ ಫೋನಿಗೆ ವಾಟ್ಸ ಅಪ್ ಮೂಲಕ ಆ ಸಂಭಾಷಣೆಯನ್ನು ಶೇರ ಮಾಡಿದೆನು. ದಿನಾಂಕ 07.02.2018 ರಂದು ಚಾಸಾ 1 ರವಿ ಶಿಂದೆಯು ನಾನು ರೆಕಾರ್ಡ ಮಾಡಿಕೊಂಡ ಆ ವಿಡಿಯೋ ಆಡಿಯೋದೊಂದಿಗೆ ಎಸಿಬಿ ಪೊಲೀಸ ಠಾಣೆಗೆ ತೆಗೆದುಕೊಂಡು ಹೋಗಿ ಆತನು ಎಸಿಬಿ ಪೊಲೀಸರಿಗೆ ಆರೋಪಿಯ ವಿರುದ್ಧ ದೂರು ಕೊಟ್ಟನು. ಈ ರೀತಿ ಚಾಸಾ 1 ರವರು ದೂರು ಕೊಟ್ಟ ಬಗ್ಗೆ ನನಗೆ ಫೋನನಲ್ಲಿ ಹೇಳಿ ನಂತರ ಅದೇ ದಿನ ಮಧ್ಯಾಹ್ನ 02.00 ಗಂಟೆಗೆ ಎಸಿಬಿ ಪೊಲೀಸರು ಮತ್ತು ಒಬ್ಬ ಪಂಚ ಮತ್ತು ಚಾಸಾ-1 ಪಿರ್ಯಾದಿ ನಮ್ಮ ಹೊಟೇಲಗೆ ಬಂದರು. ಒಬ್ಬ ಪಂಚ ಮತ್ತು ಚಾಸಾ-1 ರವಿ ಶಿಂದೆ ನಮ್ಮ ಹೊಟೇಲನಲ್ಲಿ ಬಂದರು. ಚಾಸಾ-1 ಮತ್ತು ಪಂಚ ಇವರು ನಮ್ಮ ಹೊಟೇಲಗೆ ಬಂದು ನಾನು ಕುಳಿತುಕೊಳ್ಳುವ ಕ್ಯಾಶ ಕೌಂಟರ ಮುಂದೆ ಇದ್ದ ಸೋಫಾದ ಮೇಲೆ ಕುಳಿತುಕೊಂಡರು.ನನಗೆ ಚಾಸಾ-1 ರವಿ ಶಿಂದೆ ಇವರು ನನಗೆ 2 ನೇ ಆರೋಪಿ ರಾಠೋಡಗೆ ಫೋನ ಮಾಡಲು ಹೇಳಿದರು. 2 ನೇ ಆರೋಪಿಯು ದಿಃ06.07.2018 ರಂದು ನಮ್ಮ ಹೊಟೇಲಗೆ ಬಂದಾಗ ಆತ ನನಗೆ ಆತನ ಮೊಬೈಲ ಫೋನ ನಂಬರ ಕೊಟ್ಟಿದ್ದನು. ನಾನು 2 ನೇ ಆರೋಪಿಗೆ ದಿಃ07.07.2018 ರಂದು ಅಂದಾಜು 02.00 ರಿಂದ 02.15

ಗಂಟೆ ಅವಧಿಯಲ್ಲಿ ಫೋನ ಮಾಡಿದೆನು. 2 ನೇ ಆರೋಪಿಗೆ ನಾನು ಫೋನನಲ್ಲಿ ನಮ್ಮ ಹೊಟೇಲನ ಮಾಲಿಕರು ಬಂದಿದ್ದಾರೆ ನೀವು ಲೇಬರ ಇನ್ಸಪೆಕ್ಟರವರನ್ನು ಕರೆದುಕೊಂಡು ಬನ್ನಿ ಎಂದು ಹೇಳಿದೆನು. ಆಗ 2 ನೇ ಆರೋಪಿಯು ಲೇಬರ ಇನ್ಸಪೆಕ್ಟರ ಜಾದವ ಇವರು ಕಚೇರಿಯಲ್ಲಿ ಇಲ್ಲ ಅವರು ಡಿಸಿ ಆಫೀಸಿಗೆ ಹೋಗಿದ್ದಾರೆ ನಾನೇ 15 ನಿಮಿಷದಲ್ಲಿ ಹಣ ಪಡೆದುಕೊಳ್ಳಲು ಬರುತ್ತೇನೆಂದು ಹೇಳಿದರು. ಮಧ್ಯಾಹ್ನ 02.40 ಗಂಟೆಗೆ 2 ನೇ ಆರೋಪಿಯು ನಮ್ಮ ಹೊಟೇಲಗೆ ಬಂದು ಚಾಸಾ 1 ರವಿ ಶಿಂದೆ ಇವರು ಸೋಫಾದಲ್ಲಿ ಕುಳಿತ ಟೇಬಲನ ಮುಂದೆ ಇದ್ದ ಸೋಫಾದಲ್ಲಿ ಕುಳಿತುಕೊಂಡನು. ಆ ರೀತಿ 2 ನೇ ಆರೋಪಿ ಚಾಸಾ-1 ಎದರುಗಡೆ ಇದ್ದ ಸೋಫಾದಲ್ಲಿ ಕುಳಿತುಕೊಂಡಾಗ ಚಾಸಾ-1 ರವಿ ಶಿಂದೆ ಮತ್ತು 2 ನೇ ಆರೋಪಿ ಒಬ್ಬರಿಗೊಬ್ಬರು ಮಾತನಾಡಿಕೊಂಡರು. 2 ನೇ ಆರೋಪಿಯು ಚಾಸಾ 1 ರವಿ ಶಿಂದೆ ಇವರಿಗೆ 4000/- ಹಣ ಕೊಡು ಎಂದು ಕೇಳಿದರು ಆಗ ಚಾಸಾ-1 ರವಿ ಶಿಂದೆ ಇವರು ತಾನು ಲೇಬರ ಇನ್ಸಪೆಕ್ಟರ ಜಾದವ ಇವರೊಂದಿಗೆ ಮಾತನಾಡಿದ್ದೆನೆ ಅವರು 3000 ಕೊಡಲು ಹೇಳಿದ್ದಾರೆಂದು ಹೇಳಿದರು. ಚಾಸಾ-1 ರವಿ ಶಿಂದೆ ಈತನು ಆತನ ಬಳಿ ಇದ್ದ 3000 ಹಣ ತೆಗೆದು 2 ನೇ ಆರೋಪಿಗೆ ಕೊಟ್ಟನು. 2 ನೇ ಆರೋಪಿಯು ಈ 3000 ಹಣವನ್ನು ಚಾಸಾ 1 ರವರಿಂದ ಪಡೆದು ಅದನ್ನು ಎರಡು ಕೈಗಳಿಂದ ಏಣಿಸಿ ಕರಿ ಬಣ್ಣದ ಹ್ಯಾಂಡ ಬ್ಯಾಗಿನಲ್ಲಿ ಇಟ್ಟುಕೊಂಡರು. ಚಾಸಾ 1 ರವರು ಆತ ಮತ್ತು 2 ನೇ ಆರೋಪಿಯ ನಡುವೆ ಆದ ಸಂಭಾಷಣೆಯನ್ನು ವಾಯ್ಸು ರೆಕಾರ್ಡರನಲ್ಲಿ ರೆಕಾರ್ಡ ಮಾಡಿಕೊಂಡಿದ್ದನು. 2 ನೇ ಆರೋಪಿಯು ಚಾಸಾ 1 ರವರಿಂದ 3000 ಹಣ ಪಡೆದ ನಂತರ

ಚಾಸಾ-1 ರವರು ಲೇಬರ ಇನ್ಸಪೆಕ್ಟರ ಜಾದವ ಇವರಿಗೆ ಫೋನ ಮಾಡಿ ತಿಳಿಸಿದರು. ನಂತರ ಚಾಸಾ-1 ರವಿ ಶಿಂದೆ ಹೊಟೇಲನ ಹೊರಗೆ ಹೋಗಿ ತನ್ನ ಕರವಸ್ತ್ರವನ್ನು ತೆಗೆದು ಸನ್ನೆ ನೀಡಿದರು.

ಈ ಹಂತದಲ್ಲಿ ಊಟದ ವಿರಾಮವಾಗಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನ ಮುಂದುಡಲಾಯಿತು.

(ಸಾಕ್ಷಿಗೆ ಕನ್ನಡ ಸರಿಯಾಗಿ ಬಾರದೆ ಇದುದ್ದರಿಂದ ಹಿಂದಿ ಭಾಷೆಯಲ್ಲಿ ಸಾಕ್ಷವನ್ನು ನುಡಿದಿದ್ದು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ**.**

ದಿನಾಂಕಃ **21.02.2024** ರಂದು ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನ್ಯಾಯಾಲಯದಲ್ಲಿ ಮಧ್ಯಾಹ್ನ ಬೇರೆ ಕೇಸುಗಳ ವಿಚಾರಣೆ ಇದುದ್ದರಿಂದ ನ್ಯಾಯಾಲಯದ ವೇಳೆ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ.

ದಿನಾಂಕಃ **23.04.2024** ರಂದು ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ರವಿ ಶಿಂಥೆ ಇವರು ಕರವಸ್ತ್ರವನ್ನು ತೆಗೆದು ತನ್ನೆ ನೀಡಿದ ನಂತರ ಎಸಿಬಿ ಅವರು ಮತ್ತು ಪಂಚ ನಂ.2 ರವರೆಲ್ಲರೂ ನಮ್ಮ ಹೊಟೇಲ ಬಳಿ ಬಂದರು. ಎಸಿಬಿ ಯವರು ಅವರ ಗುರುತಿನ ಚೀಟಿಯನ್ನು 2 ನೇ ಆರೋಪಿಗೆ ತೋರಿಸಿ ಅವರ ಪರಿಚಯ ಮಾಡಿಕೊಟ್ಟರು. 2 ನೇ ಆರೋಪಿಗೆ ತನಿಖೆಗೆ ಸಹಕರಿಸುವಂತೆ ಎಸಿಬಿ ಯವರು ಕೇಳಿಕೊಂಡರು. ನಂತರ ಎಸಿಬಿ ಯವರು ಪ್ರಕ್ರಿಯೇ ಪ್ರಾರಂಭ ಮಾಡಿದರು. ಎಸಿಬಿ ಅವರು 2 ಬೌಲಗಳಲ್ಲಿ ದ್ರಾವಣ ತಯಾರಿಸಿದರು. ಆ ದ್ರಾವಣದ ಸ್ಯಾಂಪಲ್ ತೆಗೆದು ಅವುಗಳಿಗೆ ಆರ್ಟಿಕಲ್ 7 ಮತ್ತು 7(ಎ) ಎಂದು ಕೊಟ್ಟರು. ನಂತರ 2 ನೇ ಆರೋಪಿ ಆತನ ಬಲಕೈ ಬೆರಳುಗಳನ್ನು ಒಂದು ಬೌಲದಲ್ಲಿ ಇದ್ದ ದ್ರಾವಣದಲ್ಲಿ ಅದ್ದಿ ತೊಳೆಯಲು ಹೇಳಿದರು, ಆಗ 2 ನೇ ಆರೋಪಿಯು ಆತನ ಬಲಗೈ ಬೆರಳುಗಳನ್ನು ಒಂದು ಬೌಲನಲ್ಲಿ ಇದ್ದ ದ್ರಾವಣದಲ್ಲಿ ಅದ್ದಿ ತೊಳೆದಾಗ ಆ ದ್ರಾವಣವು ಪಿಂಕ್ ಬಣ್ಣಕ್ಕೆ ತಿರುಗಿತು. ಆ ದ್ರಾವಣವನ್ನು ಎಸಿಬಿ ಅವರು ಸಂಗ್ರಹಿಸಿ ಅದಕ್ಕೆ ಆರ್ಟಿಕಲ್ ನಂ.8 ಮತ್ತು 8(ಎ) ಎಂದು ಕೊಟ್ಟರು. ನಂತರ 2 ನೇ ಆರೋಪಿ ಆತನ ಎಡಕೈ ಬೆರಳುಗಳನ್ನು ಇನ್ನೊಂದು ಬೌಲದಲ್ಲಿ ಇದ್ದ ದ್ರಾವಣದಲ್ಲಿ ಅದ್ದಿ ತೊಳೆಯಲು ಹೇಳಿದರು, ಆಗ 2 ನೇ ಆರೋಪಿಯು ಆತನ ಎಡಗೈ ಬೆರಳುಗಳನ್ನು ಇನ್ನೊಂದು ಬೌಲನಲ್ಲಿ ಇದ್ದ ದ್ರಾವಣದಲ್ಲಿ ಅದ್ದಿ ತೊಳೆದಾಗ ಆ ದ್ರಾವಣವು ಸಹ ಪಿಂಕ್ ಬಣ್ಣಕ್ಕೆ ತಿರುಗಿತು. ಆ ದ್ರಾವಣವನ್ನು

ಎಸಿಬಿ ಅವರು ಸಂಗ್ರಹಿಸಿ ಅದಕ್ಕೆ ಆರ್ಟಿಕಲ್ ನಂ.9 ಮತ್ತು 9(ಎ) ಎಂದು ಕೊಟ್ಟರು. ನಂತರ ಎಸಿಬಿ ಯವರು ಹಣ ಹಾಜರು ಮಾಡುವಂತೆ ಹೇಳಿದಾಗ ಆರೋಪಿಯು ಆತನ ಬಳಿ ಇದ್ದ ಕಪ್ಪು ಬಣ್ಣದ ಬ್ಯಾಗನ ಜೇಪ ತೆಗೆದು ಹಣ ಹಾಜರು ಮಾಡಿದನು. ಆ ಹಣವನ್ನು ಪರಿಶೀಲಿಸುವಂತೆ ಪಂಚರಿಗೆ ಹೇಳಿದಾಗ ಪಂಚರು ಅವರ ಬಳಿ ಇದ್ದ ಈಗಾಗಲೇ ಹಾಳೆಯಲ್ಲಿ ಬರೆದ ನೋಟುಗಳ ನಂಬರ ಮತ್ತು ಮೌಲ್ಯಕ್ಕೆ ತಾಳೆ ಮಾಡಿ ನೋಡಿದಾಗ 2 ನೇ ಆರೋಪಿ ಹಾಜರು ಮಾಡಿದ ಆ ಹಣವು ಆ ಹಾಳೆಯಲ್ಲಿ ಬರೆದ ನೋಟುಗಳ ನಂಬರಕ್ಕೆ ತಾಳೆ ಆಗಿತ್ತು.2 ನೇ ಆರೋಪಿ ಹಾಜರು ಮಾಡಿದ ಆ ನೋಟುಗಳು ಒಟ್ಟು 3 ನೋಟುಗಳು ಇದ್ದು, 2000 ರೂ. ಒಂದು ನೋಟು, 500 ಮುಖ ಬೆಲೆಯ 2 ನೋಟುಗಳು ಇದ್ದು, ಅವುಗಳು ಹಾಳೆಯಲ್ಲಿ ಬರೆದ ನೋಟುಗಳಿಗೆ ತಾಳೆ ಆಗಿತ್ತು. ಆ ನೋಟುಗಳನ್ನು ಎಸಿಬಿ ಯವರು ಒಂದು ಕವರನಲ್ಲಿ ಹಾಕಿ ಪ್ಯಾಕ್ ಮಾಡಿ ಅದಕ್ಕೆ ಆರ್ಟಿಕಲ್ ನಂ.10 ಎಂದು ಕೊಟ್ಟರು. ನಂತರ ಎಸಿಬಿ ಯವರು ಇನ್ನೊಂದು ಬೌಲನಲ್ಲಿ ದ್ರಾವಣ ತಯಾರಿಸಿ ಆ ದ್ರಾವಣದ ಸ್ಯಾಂಪಲ್ ತೆಗೆದು ಅದಕ್ಕೆ ಆರ್ಟಿಕಲ್ 11 ಎಂದು ಕೊಟ್ಟರು. ನಂತರ ಹತ್ತಿಯನ್ನು ತೆಗೆದು ಅದರ ಸ್ಯಾಂಪಲ್ ತೆಗೆದು ಆ ಹತ್ತಿಯ ತುಂಡಿಗೆ ಆರ್ಟಿಕಲ್ ನಂ.12 ಎಂದು ಕೊಟ್ಟರು. ಉಳಿದ ಹತ್ತಿಯ ತುಂಡಿನಿಂದ ಕಪ್ಪು ಬ್ಯಾಗಿನ ಹಣ ಇಟ್ಟ ಭಾಗವನ್ನು ಹತ್ತಿಯ ತುಂಡಿನಲ್ಲಿ ಒರೆಸಿ ಆ ರೀತಿ ಒರೆಸಿದ ಹತ್ತಿಯ ತುಂಡನ್ನು ದ್ರಾವಣದಲ್ಲಿ ಅದ್ದಿದಾಗ ಆ ದ್ರಾವಣ ಪಿಂಕ್ ಬಣ್ಣಕ್ಕೆ ತಿರುಗಿತ್ತು. ಆ ದ್ರಾವಣವನ್ನು ಸಂಗ್ರಹಿಸಿ ಅದಕ್ಕೆ ಆರ್ಟಿಕಲ್ 13, 13(ಎ) ಎಂದು ನೀಡಲಾಗಿತ್ತು. ಆ ರೀತಿ ಅದ್ದಿದ ಹತ್ತಿಯ ತುಂಡಿಗೆ ಆರ್ಟಿಕಲ್ 14,

ಎಂದು ನೀಡಲಾಯಿತು. ಆರೋಪಿಯು ಅಲ್ಲಿ ಇದ್ದ ಆ ಬ್ಯಾಗನಲ್ಲಿ ಒಂದು ಲಕೋಟೆ ಇದ್ದು ಅದನ್ನು ಜಪ್ತು ಮಾಡಿ ಅದಕ್ಕೆ ಆರ್ಟಿಕಲ್ 15 ಎಂದು ನೀಡಲಾಯಿತು. ಆರೋಪಿಯು ಹೊಂದಿದ ಕಪ್ಪು ಬಣ್ಣದ ಬ್ಯಾಗನ್ನು ಪರಿಶೀಲಿಸಿದಾಗ ಅದರಲ್ಲಿ ಎಸ್.ಬಿ.ಐ ಬ್ಯಾಂಕ್ ಪಾಸ್ ಬುಕ್ ಇದ್ದು ಆ ಪಾಸ್ ಬುಕ್ಕನ್ನು 2 ನೇ ಆರೋಪಿಗೆ ವಾಪಾಸ್ಸ ನೀಡಲಾಯಿತು. ಆ ಕಪ್ಪು ಬಣ್ಣದ ಬ್ಯಾಗನ್ನು ಜಪ್ತು ಮಾಡಿ ಅದಕ್ಕೆ ಆರ್ಟಿಕಲ್ 16 ಎಂದು ನೀಡಲಾಯಿತು. ಎಸಿಬಿ ಯವರು ಚಾಸಾ-1 ರವಿ ಶಿಂಧೆ ಇವರಲ್ಲಿ ಇದ್ದ ಸೋನಿ ಕಂಪನಿಯ ವೈಸ್ ರೆಕಾರ್ಡನ್ನು ಪಡೆದುಕೊಂಡರು. ವೈಸ್ ರೆಕಾರ್ಡರ್‌ನಲ್ಲಿ ಚಾಸಾ-1 ರವಿ ಶಿಂಧೆ ಮತ್ತು 2 ನೇ ಆರೋಪಿಯ ನಡುವೆ ನಡೆದ ಸಂಭಾಷಣೆ ರೆಕಾರ್ಡ ಆಗಿತ್ತು. ಅದನ್ನು ಪ್ಲೇ ಮಾಡಿ ಕೇಳಿಸಲಾಗಿತ್ತು. ನಂತರ ಆ ವೈಸ್ ರೆಕಾರ್ಡರನಲ್ಲಿ ಇದ್ದ ಧ್ವನಿ ಮುದ್ರಣವನ್ನು ಎಸಿಬಿ ಯವರ ಲ್ಯಾಪಟಾಪ್ ಸಹಾಯದಿಂದ ಎರಡು ಡಿವಿಡಿ ಗಳಿಗೆ ಕಾಪಿ ಮಾಡಿ ಆ ಡಿವಿಡಿ ಗಳಿಗೆ ನಂಬರ ನೀಡಲಾಗಿತ್ತು. ಆ ನಂಬರ ನನಗೆ ಸರಿಯಾಗಿ ನೆನಪಿಲ್ಲ.

ಈ ಹಂತದಲ್ಲಿ ಊಟದ ವಿರಾಮ ಆಗಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ವಿಶೇಷ ಸರ್ಕಾರಿ ಅಭಿಯೋಜಕರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ.

ಸಾಕ್ಷಿಯನ್ನು ಪುನಃ ಮಧ್ಯಾಹ್ಣ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಎಸಿಬಿ ಅಧಿಕಾರಿ ಹಿರಿಯ ಕಾರ್ಮಿಕ ನಿರೀಕ್ಷಕರನ್ನು ಕರೆದುಕೊಂಡು ಬರುವಂತೆ ಒಬ್ಬ ಎಸಿಬಿ ಸಿಬ್ಬಂದಿಯವರನ್ನು ಮತ್ತು ಪಂಚ ನಂ.1 ಇವರನ್ನು ಕಳುಹಿಸಿದರು. ಮದ್ಯಾಹ್ಣ 3-30 ಗಂಟೆಗೆ ಎಸಿಬಿ ಅವರು 2 ನೇ ಆರೋಪಿಯನ್ನು ದಸ್ತಗಿರಿ ಮಾಡಿದರು. ಎಸಿಬಿ ಅವರು 2 ನೇ ಆರೋಪಿಯನ್ನು ದಸ್ತಗಿರಿ ಮಾಡಿದ ನಂತರ ಚಾಸಾ-1 ರವಿ ಶಿಂಧೆ, ನನಗೆ ಮತ್ತು 1 ನೇ ಪಂಚರಿಗೆ ಅಲ್ಲಿ ನಡೆದ ಘಟನೆಯ ಬಗ್ಗೆ ಕೇಳಿದಾಗ ನಾವು ಅಲ್ಲಿ ನಡೆದ ಘಟನೆ ಬಗ್ಗೆ ಹೇಳಿದ್ದೆವು. 1 ನೇ ಆರೋಪಿಯನ್ನೂ ಸಹ ನಮ್ಮ ಹೊಟೇಲಗೆ ಕರೆದುಕೊಂಡು ಬಂದರು. 1 ನೇ ಆರೋಪಿಗೂ, ಎಸಿಬಿ ಅವರಿಗೂ ಆತನ ವಿರುದ್ಧ ಪ್ರಕರಣ ದಾಖಲಾದ ಬಗ್ಗೆ ತಿಳಿಸಿ ತನಿಖೆಗೆ ಸಹಕರಿಸುವಂತೆ ಕೇಳಿದರು. ನಂತರ ಎಸಿಬಿ ಅವರು ಆರೋಪಿ ನಂ.1 ಮತ್ತು 2 ನ್ನು ಮತ್ತು ಅಲ್ಲಿದ್ದ ನಮ್ಮೆಲ್ಲರನ್ನೂ ಮಜಗಾಂವನಲ್ಲಿ ಇರುವ ಕಾರ್ಮಿಕ ಕಚೇರಿಗೆ ಕರೆದುಕೊಂಡು ಬಂದರು. ಆ ರೀತಿ ನಮ್ಮನ್ನು ಕರೆದುಕೊಂಡು ಬರುವ ಮೊದಲು ನಮ್ಮ ಹೊಟೇಲನಲ್ಲಿ ಘಟನಾ ಸ್ಥಳದ ನಕಾಶೆಯನ್ನು ತಯಾರಿಸಲಾಗಿತ್ತು. ಆ ನಕಾಶೆಯನು ನಾನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದೆ. ಕಾರ್ಮಿಕ ಕಚೇರಿಗೆ ಬಂದ ನಂತರ ಎಸಿಬಿ ಅವರು ಆರೋಪಿತರಿಗೆ ಅವರ ಹೇಳಿಕೆಯನ್ನು ಬರೆದುಕೊಡುವಂತೆ ಹೇಳಿದರು, ಆಗ ಆರೋಪಿ ನಂ.1 ಮತ್ತು 2 ರವರು ಪ್ರತ್ಯೇಕವಾಗಿ ಅವರ ಹೇಳಿಕೆಯನ್ನು

ಬರೆದುಕೊಟ್ಟರು. ಆರೋಪಿತರು ಕೊಟ್ಟ ಲಿಖಿತ ವಿವರಣೆಯನ್ನು ಪಿರ್ಯಾದಿದಾರ ರವಿ ಶಿಂಧೆ ಓದಿ ನೋಡಿದರು. ಎಸಿಬಿ ಅವರು ನನ್ನ ಹೇಳಿಕೆ ಪಡೆದುಕೊಂಡರು. ಎಸಿಬಿ ಯವರು ಪ್ರಕ್ರಿಯೆಯನ್ನು ಮಾಡುವಾಗ ನಮ್ಮ ಹೊಟೇಲನಲ್ಲಿ ಮತ್ತು ಕಾರ್ಮಿಕ ಕಚೇರಿಯಲ್ಲಿ ಪೊಟೊಗಳನ್ನು ತೆಗೆದಿದ್ದರು. ಅಲ್ಲಿ ಟ್ರ್ಯಾಪ್ ಕಾಲಕ್ಕೆ ತೆಗೆದ 11 ಪೊಟೋಗಳನ್ನು ನಾನು ಗುರುತಿಸಿದ್ದು ಅವುಗಳನ್ನು ನಿಪಿ-9 ಎಂದು ಗುರುತಿಸಲಾಯಿತು. ಎಸಿಬಿ ಪೊಲೀಸರು ನಮ್ಮ ಧ್ವನಿಯನ್ನು ತಜ್ಞರಿಗೆ ಕಳುಹಿಸಲು 1 ಮತ್ತು 2 ನೇ ಆರೋಪಿತರ ಮಾದರಿ ಧ್ವನಿಯನ್ನು, ನನ್ನ ಹಾಗೂ ಪಿರ್ಯಾದಿ ರವಿ ಶಿಂಧೆಯವರ ಮಾದರಿ ಧ್ವನಿಯನ್ನು ರೆಕಾರ್ಡ ಮಾಡಿಕೊಂಡರು. ಆ ರೀತಿ ನಮ್ಮ ಮಾದರಿ ಧ್ವನಿಯನ್ನು ಸೋನಿ ಕಂಪನಿಯ ವೈಸ ರೆಕಾರ್ಡರ್‌ನಲ್ಲಿ ರೆಕಾರ್ಡ ಮಾಡಿಕೊಂಡು ನಂತರ ಲ್ಯಾಪಟಾಪ್ ಸಹಾಯದಿಂದ ಆ ಮಾದರಿ ಧ್ವನಿಗಳನ್ನು ಡಿವಿಡಿಯಲ್ಲಿ ಕಾಪಿ ಮಾಡಿದರು. ಆ ಡಿವಿಡಿ ಗಳಿಗೆ ಆರ್ಟಿಕಲ ನಂಬರ ಕೊಟ್ಟರು. 7 ರಿಂದ 21 ವರೆಗಿನ ಆರ್ಟಿಕಲ್‌ಗಳನ್ನು ಸೀಲ್ ಮಾಡಿದರು. ಅದಕ್ಕೆ ಸೀಲ್ ಹಾಕಿದರು, ಸೀಲನ ನಂಬರ ನನಗೆ ಹೇಳಲು ನೆನಪಿಲ್ಲ. ನಮ್ಮ ಸಮಕ್ಷಮ ಟ್ರ್ಯಾಪ್ ಪಂಚನಾಮೆ ಮಾಡಿದ್ದು, ಟ್ರ್ಯಾಪ್ ಪಂಚನಾಮೆಗೆ ನಾನು ಸಹಿ ಹಾಕಿರುತ್ತೇನೆ. ಟ್ರ್ಯಾಪ್ ಪಂಚನಾಮೆಯನ್ನು ನಾನು ಗುರುತಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.ಸಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ನನ್ನ ಹೇಳಿಕೆಯನ್ನು ಎಸಿಬಿಯವರು ಟ್ರ್ಯಾಪ್ ಮಾಡಿರುವ ದಿನವೇ ಪಡೆದುಕೊಂಡರು. ಆರೋಪಿತರು ಮತ್ತು ನನ್ನ ನಡುವೆ ಆದ ಸಂಭಾಷಣೆ ಮತ್ತು ಪಿರ್ಯಾದಿ ರವಿ ಶಿಂಧೆ ಹಾಗೂ

ಆರೋಪಿ ನಂ.2 ರ ನಡುವೆ ಆದ ಸಂಭಾಷಣೆ ಇರವ ಡಿವಿಡಿ ಮತ್ತು ಮಾದರಿ ಧ್ವನಿಯ ಡಿವಿಡಿ ಪ್ಲೇ ಮಾಡಿ ಕೇಳಿಸಿದತೆ ಗುರುತಿಸುತ್ತೇನೆ. ನನಗೆ ಎಸಿಬಿ ಯವರು ಇನ್ನೊಂದು ದಿನ ಎಸಿಬಿ ಕಚೇರಿಗೆ ಕರೆಸಿದಾಗ ನಾನು ಎಸಿಬಿ ಕಚೇರಿಯಲ್ಲಿ ಎಸಿಬಿ ಯವರಿಗೆ ಹೇಳಿಕೆ ಕೊಟ್ಟಿರುತ್ತೇನೆ. ನೋಟುಗಳನ್ನು ನೋಡಿದರೆ ಗುರುತಿಸುತ್ತೇನೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ವಿಶೇಷ ಅಭಿಯೋಜಕರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ.

ದಿನಾಂಕಃ <u>**24.04.2024**</u> ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ಆ ದಿನ ಟ್ರ್ಯಾಪ್ ಪಂಚನಾಮೆ ಕಾಲಕ್ಕೆ ಜಪ್ತು ಮಾಡಿದ ಆರ್ಟಿಕಲ್ ನಂ.7 ರಿಂದ 9 ಮತ್ತು 11 ರಿಂದ 21 ಇವುಗಳನ್ನು ನಾನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ.7 ರಿಂದ 20 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಟ್ರೇಜರಿ ಬಾಕ್ಸನಲ್ಲಿ ಇಟ್ಟಿದ್ದ ಹಣವನ್ನು ತೋರಿಸಲು ಸೀಲಾದ ಲಕೋಟೆಯನ್ನು ತೆರೆದು ತೋರಿಸಲು ಮಾನ್ಯ ವಿಶೇಷ ಸರಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು. ಸೀಲಾದ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತರು, ಆರೋಪಿ ಪರ ಮಾನ್ಯ ವಕೀಲರು ಮತ್ತು ಮಾನ್ಯ ವಿಶೇಷ ಸರಕಾರಿ ಅಭಿಯೋಜಕರ ಸಮಕ್ಷಮ ತೆರೆಯಲಾಯಿತು. ಸಾಕ್ಷಿಯು 2,000 ರೂಪಾಯಿಯ ಒಂದು ನೋಟು ಮತ್ತು 500 ರೂ. ಮುಖ ಬೆಲೆಯ 2 ನೋಟುಗಳನ್ನು ಗುರುತಿಸಿದ್ದು ಅವುಗಳನ್ನು ಮು.ಮಾ.21 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಆರ್ಟಿಕಲ್ 6ರಲ್ಲಿ ಇರುವ ಆಡಿಯೋ ವಿಡಿಯೋವನ್ನು ಪ್ಲೇ ಮಾಡಿ ತೋರಿಸಿ ಕೇಳಿಸಲು ಮಾನ್ಯ ವಿಶೇಷ ಸರಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಆರ್ಟಿಕಲ್ 6 ನ್ನು ಪ್ಲೇ ಮಾಡಿ ತೋರಿಸಲು ಅನುಮತಿ ನೀಡಲಾಯಿತು. ಆರ್ಟಿಕಲ್ 6ನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತರ, ಆರೋಪಿ ಪರ ಮಾನ್ಯ ವಕೀಲರು, ಮಾನ್ಯ ವಿಶೇಷ ಸರಕಾರಿ ಅಭಿಯೋಜಕರು ಇವರುಗಳ ಸಮಕ್ಷಮ ಸೀಲನ್ನು ತೆರೆದು ಡಿವಿಡಿ ಯನ್ನು ಲೋಕಾಯುಕ್ತ ಪೊಲೀಸರು ತಂದ ಲ್ಯಾಪಟಾಪ್‌ಗೆ ಹಾಕಿ ಪ್ಲೇ ಮಾಡಿ ಕೇಳಿಸಲಾಯಿತು. ಸಾಕ್ಷಿಯು ಈ ಡಿವಿಡಿ ಯಲ್ಲಿ ಇದ್ದ 2 ಪೋಲ್ಡರ್‌ಗಳಲ್ಲಿನ ಧ್ವನಿಗಳನ್ನು ಕೇಳಿಸಿದ್ದು ಒಂದು ಪೋಲ್ಡರ್‌ನಲ್ಲಿ ಆಡಿಯೋ ಮಾತ್ರ ಇದ್ದು, ಇನ್ನೊಂದು ಪೋಲ್ಡರನಲ್ಲಿ ಆಡಿಯೋ ಮತ್ತು ವಿಡಿಯೋ ಇದ್ದುದ್ದನ್ನು ಕೇಳಿ ಗುರುತಿಸಿದ್ದು, ಇದರಲ್ಲಿ ಇದ್ದ ವಿಡಿಯೋ ಆಡಿಯೋವನ್ನು ನಾನೇ ರೆಕಾರ್ಡ ಮಾಡಿರುತ್ತೇನೆ, ಅದು ಯಥಾವತ್ತಾಗಿದೆ ಎಂದು ನುಡಿದಿದ್ದಾರೆ. ಆಡಿಯೋವನ್ನು ಚಾಸಾ-1 ರವರು

ರೆಕಾರ್ಡ ಮಾಡಿರುತ್ತಾರೆ ಎಂದು ನುಡಿದಿದ್ದಾರೆ. ಸಾಕ್ಷಿಗೆ ಆರ್ಟಿಕಲ್ 17/ಎಂಓ.16 ರ ಸೀಲನ್ನು ತೆಗೆದು ಪ್ಲೇ ಮಾಡಿ ಕೇಳಿಸಿದಾಗ ಸಾಕ್ಷಿಯು ಅದು ಟ್ರ್ಯಾಪ್ ಕಾಲಕ್ಕೆ ರೆಕಾರ್ಡ ಮಾಡಲಾಗಿದ್ದು, ಅದನ್ನು ಈ ಡಿವಿಡಿಗೆ ಕಾಪಿ ಮಾಡಿದ್ದು ಯಥಾವತ್ತಾಗಿದೆ ಎಂದು ನುಡಿದಿದ್ದಾರೆ. ಈ ಧ್ವನಿ ಮುದ್ರಣದಲ್ಲಿ ಚಾಸಾ-1 ಮತ್ತು 2 ನೇ ಆರೋಪಿಯ ನಡುವೆ ಸಂಭಾಷಣೆ ಇರುತ್ತದೆ ಎನ್ನುತ್ತಾರೆ. ಸಾಕ್ಷಿಗೆ ಆರ್ಟಿಕಲ್ 18 ನ್ನು ತೆರೆದು ಪ್ಲೇ ಮಾಡಿ ಕೇಳಿಸಿದಾಗ 1 ನೇ ಆರೋಪಿಯ ಮಾದರಿ ಧ್ವನಿ ಎಂದು ಗುರುತಿಸಿದ್ದಾರೆ. ಸಾಕ್ಷಿಗೆ ಆರ್ಟಿಕಲ್ 19 ನ್ನು ತೆರೆದು ಪ್ಲೇ ಮಾಡಿ ಕೇಳಿಸಿದಾಗ 2 ನೇ ಆರೋಪಿಯ ಮಾದರಿ ಧ್ವನಿ ಎಂದು ಗುರುತಿಸಿದ್ದಾರೆ. ಸಾಕ್ಷಿಗೆ ಆರ್ಟಿಕಲ್ 20 ನ್ನು ತೆರೆದು ಪ್ಲೇ ಮಾಡಿ ಕೇಳಿಸಿದಾಗ ಚಾಸಾ-1 ರವಿ ಶಿಂಧೆ ಯವರ ಮಾದರಿ ಧ್ವನಿ ಎಂದು ಗುರುತಿಸಿದ್ದಾರೆ. ಸಾಕ್ಷಿಗೆ ಆರ್ಟಿಕಲ್ 21 ನ್ನು ತೆರೆದು ಪ್ಲೇ ಮಾಡಿ ಕೇಳಿಸಿದಾಗ ಅದು ನನ್ನ ಮಾದರಿ ಧ್ವನಿ ಎಂದು ಗುರುತಿಸಿದ್ದಾರೆ.

ಪಾಟೀ ಸವಾಲುಃ

ಆರೋಪಿತರ ಪರ ಮಾನ್ಯ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ವೇಳೆ ಮಂಜೂರು ಮಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ

ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ**.**